**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ಕೇಂದ್ರ ಕಛೇರಿ : ಬೆಂಗಳೂರು**

**ಪತ್ರಿಕಾ ಪ್ರಕಟಣೆ**

**"ಕ.ರಾ.ರ.ಸಾ.ನಿಗಮವು ದಿನಾಂಕ:31.05.2017 ರಂದು ವಿಶ್ವ ತಂಬಾಕು ಮುಕ್ತ ದಿನಾಚರಣೆಯ ನಿಮಿತ್ತ ಆಯೋಜಿಸಿದ್ದ ಕಾರ್ಯಕ್ರಮ : "ತಂಬಾಕು – ಅಭಿವೃದ್ಧಿಗೆ ಮಾರಕ"**

ಈ ಕಾರ್ಯಕ್ರಮದ ಪ್ರಯುಕ್ತ **ನಿಗಮದ ಶ್ರೀ.ಎಸ್.ಆರ್.ಉಮಾಶಂಕರ್, ಭಾಆಸೇ ವ್ಯವಸ್ಥಾಪಕ ನಿರ್ದೇಶಕರು, ಕೆಎಸ್‌ಆರ್‌ಟಿಸಿ** ರವರು ಮಾತನಾಡುತ್ತ, ವಿಶ್ವ ಆರೋಗ್ಯ ಸಂಸ್ಥೆಯು ಅಂದಾಜಿಸುರುವಂತೆ ವಿಶ್ವದಲ್ಲಿ ಪ್ರತಿ ವರ್ಷ ತಂಬಾಕು ಉತ್ಪನ್ನಗಳ ಸೇವನೆಯಿಂದ ಸುಮಾರು 5 ಮಿಲಿಯನ್ ವ್ಯಕ್ತಿಗಳು ಸಾವನ್ನಪ್ಪುತ್ತಿದ್ದಾರೆ ಹಾಗೂ ಪ್ರತಿದಿನ ಭಾರತ ದೇಶದಲ್ಲಿ 2100 ಜನರು ತಂಬಾಕು ಸೇವನೆಯಿಂದ ಪ್ರಾನ ಕಳೆದುಕೊಳ್ಳುತ್ತಿರುವುದು ನಿಜಕ್ಕೂ ದು:ಖಕರವಾದ ಸಂಗತಿ. **ತಂಬಾಕು –ಆರೋಗ್ಯ, ಆರ್ಥಿಕತೆ ಮತ್ತು ಅಭಿವೃದ್ಧಿಗೆ ಮಾರಕವಾಗಿದೆಯೆಂದು** ವಿಷಾದ ವ್ಯಕ್ತಪಡಿಸಿದರು.

ಕೆಎಸ್‌ಆರ್‌ಟಿಸಿ ಸಂಸ್ಥೆಯು ತಂಬಾಕು ನಿಷೇಧ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವಲ್ಲಿ ಸದಾ ಮುಂಚೂಣಿಯಲ್ಲಿರುತ್ತದೆ. ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ಜಾರಿಗೆ ತಂದಿದ್ದು, ಕಳೆದ ನಾಲ್ಕು ವರ್ಷಗಳಲ್ಲಿ ಅಂದಾಜು ರೂ.1.80ಕೋಟಿಯಷ್ಟು ದಂಡವನ್ನು ವಿಧಿಸಲಾಗಿದೆ. ದಂಡ ವಿಧಿಸುವುದೊಂದೇ ಪರಿಹಾರವಲ್ಲವಾದರೂ ಸಾರ್ವಜನಿಕರು ಹಾಗೂ ನಿಗಮದ ಸಿಬ್ಬಂದಿಗಳಲ್ಲಿ ಅರಿವು ಮೂಡಿಸುವ ಕಾರ್ಯವಾಗಬೇಕೆಂಬುದು ನಮ್ಮ ಆಶಯ ವಿವರಿಸಿದರು ಹಾಗೂ ದೇಶದಲ್ಲಿ ಈ ವರೆಗೂ ಯಾವುದೆ ಸಾರಿಗೆ ನಿಗಮಗಳಲ್ಲಿ ಇಷ್ಟು ಕಟ್ಟುನಿಟ್ಟಾಗಿ ಧೂಮಪಾನ ನಿಷೇದವನ್ನು ಜಾರಿಗೊಳಿಸಿರುವುದಿಲ್ಲ.

(1) ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳಲ್ಲಿ ತಂಬಾಕು ಉತ್ಪನ್ನಗಳ ಪ್ರಚಾರ, ಮಾರಾಟ, ಬಳಕೆಯನ್ನು ಸಂಪೂರ್ಣ ನಿಷೇಧಿಸಿದ್ದು ತಂಬಾಕು ಸೇವನೆ ವಿರುದ್ಧ ನಮ್ಮ ಹೋರಾಟ ನಿರಂತರವಾಗಿ ಮುಂದುವರೆಯಲಿದೆ ಎಂದು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರು ಹೇಳಿದ್ದಾರೆ.

(2) ಕೆಎಸ್‌ಆರ್‌ಟಿಸಿ ವತಿಯಿಂದ ವಿಶ್ವ ತಂಬಾಕು ಮುಕ್ತ ದಿನಾಚರಣೆಯನ್ನು ಆಚರಿಸಲಾಯಿತು. ನಗರದ ಮೈಸೂರು ರಸ್ತೆ ಸ್ಯಾಟಲೈಟ್ ಬಸ್‌ನಿಲ್ದಾಣದಲ್ಲಿ ಸಾರ್ವಜನಿಕರಿಂದ ವಶಪಟಿಸಿಕೊಂಡ ತಂಬಾಕು ಉತ್ಪನ್ನಗಳಿಗೆ ನೀರು ಹಾಕಿ ನಾಶಪಡಿಸುವ ಮೂಲಕ ಕಾರ್ಯಕ್ರಮಕ್ಕೆ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕರು ಚಾಲನೆ ನೀಡಿದರು.

(3) ನಂತರ ಮಾತನಾಡಿದ ಅವರು, ನಮ್ಮ ನಿಲ್ದಾಣದಲ್ಲಿ ತಂಬಾಕು ಉತ್ಪನ್ನಗಳ ಪ್ರಚಾರ, ಮಾರಾಟ,

ಬಳಕೆ, ಬಂದ್ ಮಾಡಲಾಗಿದೆ. ಇದನ್ನು ಉಲ್ಲಂಘಿಸಿ ಬೀಡಿ ಸಿಗರೇಟ್ ಸೇದುವ ಯತ್ನ ನಡೆಸಿದ ಒಂದು ಲಕ್ಷ ಜನಕ್ಕೆ ದಂಡ ವಿಧಿಸಿದ್ದು ಎರಡು ಕೋಟಿ ಹಣ ವಸೂಲಿ ಮಾಡಿದ್ದೇವೆ, ನಮ್ಮ ಬಸ್ ನಿಲ್ದಾಣದಲ್ಲಿರುವಷ್ಟು ಜನ ಸಂದಣಿ ಬೇರೆ ಕಡೆ ಸಾಧ್ಯವಿಲ್ಲ, ಹಾಗಾಗಿ ಬೇರೆ ಸಾರ್ವಜನಿಕ ಸ್ಥಳಕಿಂತ ಹೆಚ್ಚು ಪರಿಣಾಮಕಾರಿಯಾಗಿ ನಮ್ಮ ನಿಲ್ದಾಣಗಳಲ್ಲಿ ತಂಬಾಕು ಉತ್ಪನ್ನಗಳ ಮಾರಾಟ, ಬಳಕೆಯನ್ನು ನಿಷೇಧಿಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುತ್ತಿದ್ದೇವೆ ಎಂದರು.

(4) ಕಳೆದ ಐದಾರು ವರ್ಷದಿಮದ ತಂಬಾಕು ಉತ್ಪನ್ನಗಳ ಬಳಕೆ ಮಾಡದಂತೆ ಕ್ಯಾಂಪೇನ್ ಮಾಡುತ್ತಿದ್ದು, ಅದಕ್ಕೆ ಉತ್ತಮ ಪ್ರತಿಕ್ರಿಯೆ ಸಿಗುತ್ತಿದೆ. ಇತ್ತೀಚೆಗೆ ನಮ್ಮ ನಿಲ್ದಾಣಗಳಲ್ಲಿ ಸಿಗರೇಟ್ ಸೇದಿ ಸಿಕ್ಕಿಬೀಳುವವರ ಸಂಖ್ಯೆ ಕಡಿಮೆಯಾಗಿದೆ ಇದು ಉತ್ತಮ ಫಲಿತಾಂಶ, ಎಲ್ಲಾ ಬಸ್ ನಿಲ್ದಾಣಗಳಲ್ಲಿಯೂ ಈ ಜಾಗೃತಿ ಅಭಿಯಾನವನ್ನು ನಾವು ಮುಂದುವರಿಕೆ ಮಾಡುತ್ತೇವೆ ಎಂದರು.

(5) 2030ರ ವೇಳೆಗೆ ತಂಬಾಕು ಸೇವನೆ ಮುಕ್ತ ಜಗತ್ತಿನ ಗುರಿಯನ್ನು ವಿಶ್ವ ಆರೋಗ್ಯ ಸಂಸ್ಥೆ ಹೊಂದಿದೆ ಆದರೆ ತಂಬಾಕು ವಿರುದ್ಧ ಹೋರಟ ಕಷ್ಟವಾಗಿದೆ, ಪೋಲಿಯೋ, ಸಿಡುಬು ಮುಕ್ತ ಮಾಡಿದ್ದೇವೆ, ಆದರೆ ತಂಬಾಕು ಮುಕ್ತ ಮಾಡುವುದು ಕಷ್ಟ ಇದರ ಆರ್ಥಿಕ ಬಲ ಹಾಗೂ ವ್ಯಸನಿಗಳ ಮನಪರಿವರ್ತನೆ ಕಠಿಣವಾಗಿದೆ ಆದರೂ ನಮ್ಮ ಸಂಸ್ಥೆ ಜಾಗೃತಿ ಮೂಡಿಸುವಲ್ಲಿ ಮುಂದಿದೆ ಎಂದರು.

(6) ನಮ್ಮ ಸಿಬ್ಬಂದಿಗೂ ತಂಬಾಕು ಉತ್ಪನ್ನಗಳಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮ ಕುರಿತು ಅರಿವು ಮೂಡಿಸುತ್ತೇವೆ ಇಂದಿನಿಂದ ನಮ್ಮ ಆಯ್ದ ಬಸ್ ನಿಲ್ದಾಣಗಳಲ್ಲಿ ಉಚಿತ ವೈದ್ಯಕೀಯ ತಪಾಸಣಾ ಶಿಬಿರ ನಡೆಸುತ್ತೇವೆ ಎಂದರು.

**ಶ್ರೀ.ಬಿ.ಎನ್.ಎಸ್ ರೆಡ್ಡಿ, ನಿರ್ದೇಶಕರು, ಕರರಾಸಾ ನಿಗಮರವರು** ಮಾತನಾಡುತ್ತಾ, ಕರಾರಸಾನಿಗಮವು ತಂಬಾಕು ಸೇವನೆಯನ್ನು ತಡೆಯಲು ಸಾರ್ವಜನಿಕ ಸ್ಥಳಗಳಾದ ಬಸ್ ನಿಲ್ದಾಣಗಳು, ವಿಭಾಗೀಯ ಕಛೇರಿಗಳು, ಘಟಕಗಳು, ಕಾರ್ಯಾಗಾರಗಳು, ತರಬೇತಿ ಕೇಂದ್ರಗಳಲ್ಲಿ "ಧೂಮಪಾನ ನಿಷೇಧಿತ ಪ್ರದೇಶ. ಇಲ್ಲಿ ಧೂಮಪಾನ ಮಾಡುವುದು ಅಪರಾಧ, ಉಲ್ಲಂಘನೆಯಾದಲ್ಲಿ ರೂ. 200/-ವರೆಗೆ ದಂಡ ವಿಧಿಸಲಾಗುವುದು" ಎಂಬ ಫಲಕಗಳನ್ನು ಪ್ರದರ್ಶಿಸಲಾಗಿದೆ. ಇದರ ಜೊತೆಗೆ The Cigarette and other Tobacco Products (Prohibition of Advertisement and Regulation of Trade and Commerce, Production, Supply and Distribution) Act-2003ರ ಪ್ರಕಾರ ಸಂಸ್ಥೆಯ ಆವರಣದಲ್ಲಿ ಸಿಗರೇಟು ಹಾಗೂ ತಂಬಾಕು ವಸ್ತುಗಳ ಜಾಹೀರಾತನ್ನು ನಿಷೇಧಿಸಲಾಗಿದೆ. ಸದರಿ ಮಸೂದೆಯ ಪ್ರಕಾರ ಯಾವುದೇ ವ್ಯಕ್ತಿಯು ಈ ಕಾಯಿದೆಯನ್ನು ಉಲ್ಲಂಘಿಸಿದಲ್ಲಿ ರೂ.200/- ದಂಡವನ್ನು ಸ್ಥಳದಲ್ಲಿಯೇ ವಿಧಿಸಲಾಗುವುದು ಎಂದು ತಿಳಿಸಿದರು.

ಕರಾರಸಾನಿಗಮವು ಈ ಸಂಬಂಧವಾಗಿ ದಂಡವನ್ನು ವಸೂಲಿ ಮಾಡಿದ ವಿವರಗಳು ಈ ಕೆಳಕಂಡಂತಿವೆ.

| ವರ್ಷ (ಏಪ್ರಿಲ್ ನಿಂದ ಮಾರ್ಚ್) | ದಂಡ ವಿಧಿಸಿದ ಒಟ್ಟು ಪ್ರಯಾಣಿಕರು | ಮೊತ್ತ (ರೂ.ಗಳಲ್ಲಿ) |
|---|---|---|
| 2013–14 | 16438 | 32,87,600=00 |
| 2014–15 | 32018 | 64,03,600=00 |
| 2015–16 | 23166 | 46,33,200=00 |
| 2016–17 | 18982 | 37,96,400=00 |
| ಏಪ್ರಿಲ್ 2017 | 1929 | 3,85,800=00 |
| **ಒಟ್ಟು** | **92533** | **1,85,06,600=00** |

ನಿಗಮದ ಸಿಬ್ಬಂದಿಗಳಲ್ಲಿ ತಂಬಾಕಿನ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು ಹಾಗೂ ತಂಬಾಕು ತ್ಯಜಿಸಲು ನುರಿತ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಕಾರ್ಯಕ್ರಮವನ್ನು ರೂಪಿಸಲಾಗುತ್ತಿದೆ ಎಂದು ತಿಳಿಸಿದರು.

- ಈ ಸಂದರ್ಭದಲ್ಲಿ ಗಣ್ಯರು ಸಿಗರೇಟು ಹಾಗೂ ತಂಬಾಕಿನ ಮೇಲೆ ನೀರನ್ನು ಸುರಿಯುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಸಾರ್ವಜನಿಕರು ಹಾಗೂ ಸಿಬ್ಬಂದಿಗಳು ಸಿಗರೇಟ್ ಹಾಗೂ ತಂಬಾಕು ಸೇವನೆಯನ್ನು ನಿಲ್ಲಿಸಲು ಅನುಕೂಲವಾಗುವಂತೆ, ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

(7) ಸಿಬ್ಬಂದಿಗೆ ಉಚಿತವಾಗಿ ಕಾರ್ಬನ್ ಮಾನಾಕ್ಸೈಡ್ (CO) ಪರೀಕ್ಷೆಯನ್ನು ನಡೆಸಲಾಯಿತು.

(8) ತಂಬಾಕು ಸೇವನೆಯನ್ನು ತ್ಯಜಿಸುವ ಸಂಬಂಧ ಸಾರ್ವಜನಿಕರಿಂದ ಸಹಿ ಸಂಗ್ರಹ ಅಭಿಯಾನವನ್ನು ಆಯೋಜಿಸಲಾಗುತ್ತದೆ.

(9) ತಂಬಾಕು ಸೇವನೆಯ ದುಷ್ಪರಿಣಾಮಗಳ ಬಗ್ಗೆ ಪೋಸ್ಟರುಗಳನ್ನು ನಿಗಮದ ಬಸ್ ನಿಲ್ದಾಣಗಳಲ್ಲಿ ಪ್ರದರ್ಶಿಸಲಾಗಿದೆ.

(10) ಪ್ರಯಾಣಿಕರ ವಿಶ್ರಾಂತಿ ಸ್ಥಳದಲ್ಲಿ ತಂಬಾಕು ಸೇವನೆಯ ದುಷ್ಪರಿಣಾಮಗಳ ಹಾಗೂ ಬಾಯಿ ಕ್ಯಾನ್ಸರ್‌ನ ಬಗ್ಗೆ ಸಾಕ್ಷ್ಯ ಚಲನಚಿತ್ರವನ್ನು ಪ್ರದರ್ಶಿಸಲಾಗುತ್ತಿದೆ.

(11) ಈ ವಿಷಯದ ಬಗ್ಗೆ ಕರಪತ್ರಗಳನ್ನು ವಿತರಿಸಲಾಗುತ್ತಿದೆ.

(12) ಕಾಯಿದೆಯನ್ನು ಉಲ್ಲಂಘಿಸುವ ಮಾರಾಟ ಅಂಗಡಿ/ಮಳಿಗೆಗಳಿಂದ ತಂಬಾಕು ಸಾಮಗ್ರಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತಿದೆ.

(13) ಶ್ರೀ ನಾರಾಯಣ್ ಸೇವಾ ಸಂಸ್ಥಾನ ರವರ ಸಹಯೋಗದೊಂದಿಗೆ ವಿಶ್ವ ತಂಬಾಕು ರಹಿತ ದಿನ'ದಂದು ಬಸ್ ನಿಲ್ದಾಣದಲ್ಲಿ ಆರೋಗ್ಯ ತಪಾಸಣೆಯನ್ನು ನಡೆಸಲಾಯಿತು.

(14) ಮೈಸೂರು ರಸ್ತೆ ಸ್ಯಾಟಲೈಟ್ ಬಸ್‌ನಿಲ್ದಾಣ, ಕೆಂಪೇಗೌಡ ಬಸ್ ನಿಲ್ದಾಣ ಮತ್ತು ಶಾಂತಿನಗರ ಬಸ್ ನಿಲ್ದಾಣಗಳಲ್ಲಿ ತಂಬಾಕು ಮುಕ್ತ ಸಮಾಜ ಮತ್ತು ತಂಬಾಕು ಉಪಯೋಗಿಸುವದರಿಂದ ಆಗುವ ಅನಾಹುತಗಳ ಬಗ್ಗೆ ಜಾಗೃತಿ ಮೂಡಿಸುವ ಬೀದಿ ನಾಟಕಗಳನ್ನು ಹಷ್ಮಿ ಥಿಯೇಟರ್ಸ್ ಘೋರಂ ಮತ್ತು ಅಧ್ಯಕ್ಷರು, ಬೆಂಗಳೂರು ದಂತ ವಿಜ್ಞಾನ ಸಂಸ್ಥೆ, ಆಸ್ಪತ್ರೆ ಹಾಗೂ ಸ್ನಾತಕೋತ್ತರ ಸಂಶೋಧನಾ ಕೇಂದ್ರ ರವರು ಪ್ರದರ್ಶಿಸಲಾಯಿತು.

ಕಾರ್ಯಕ್ರಮದ ಬಳಿಕ ಬೀದಿ ನಾಟಕಗಳನ್ನು ಪ್ರದರ್ಶಿಸಲಾಯಿತು, ಮೂಲಕ ತಂಬಾಕು ಉತ್ಪನ್ನಗಳ ಬಳಕೆಯಿಂದ ಆಗುವ ತೊಂದರೆಗಳ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಯಿತು.

ತಮ್ಮ ವಿಶ್ವಾಸಿ,

ಸಹಿ/–

ಸಾರ್ವಜನಿಕ ಸಂಪರ್ಕಾಧಿಕಾರಿ